ಈ ಗುಂಪಿನ ಮಧ್ಯೆ ನುಗ್ಗುತ್ತಾ ಜಾಗ ಮಾಡಿಕೊಳ್ಳುತ್ತಾ ಶಂಭು ಮುಂದುವರೆಯುತ್ತಿದ್ದ.

ಸ್ವಾಮಿಯ ಗುಡಿಯ ಮುಂದೆ, ಮಹಾದ್ವಾರ ತೆಗೆಯುವುದಕ್ಕೆ ಮೊದಲು ವಿಧಿವತ್ತಾದ ಕರ್ಮಗಳು ನಡೆದಿದ್ದವು. ವೇದಘೋಷದೊಡನೆ ಹೋಮಕುಂಡವನ್ನು ಸಿದ್ಧಪಡಿಸಲಾಗಿತ್ತು. ಋತ್ವಿಕರು ಅದರ ಸುತ್ತ ನಿಂತು ಮಂತ್ರಗಳನ್ನು ಪಠಿಸುತ್ತಿದ್ದರು.

ಹೇ ಅಗ್ನಿಯೇ. ವರ್ಚಸ್ಸಿನ ಅಧಿಕಾರಿಯೇ, ನಮಗೆ ವರ್ಚಸ್ಸನ್ನು ಕೊಡು.

ಹೇ ಅಗ್ನಿಯೇ ತೇಜಸ್ಸಿನ ಅಧಿಕಾರಿಯೇ, ನಮಗೆ ತೇಜಸ್ಸನ್ನು ಕೊಡು.

ಹೇ ಅಗ್ನಿಯೇ, ಮೋಹಕನಾದ ದೈವವೇ, ನಮಗೆ ಮೋಹಕತೆಯನ್ನು ಪ್ರದಾನಿಸು...

ವ್ರತನಿಯಮವನ್ನು ಪರಿಪಾಲಿಸಿದ್ದ ಅನೇಕರು ತಮ್ಮ ಜತೆ ಕುಡಿಕೆಗಳನ್ನು ಹೊತ್ತು ತಂದಿದ್ದರು. ಆ ಕುಡಿಕೆಗಳಲ್ಲಿ ವಿಧಿಪೂರ್ವಕವಾಗಿ ತುಪ್ಪವನ್ನು ತುಂಬಿದ್ದರು. ಅಗ್ನಿಕುಂಡದಲ್ಲಿ ಪುರೋಹಿತರು ವೇದಘೋಷ ಮಾಡುತ್ತಾ, ಈ ಕುಡಿಕೆಗಳಲ್ಲಿ ತುಂಬಿದ್ದ ತುಪ್ಪವನ್ನು ಸುರಿಯುತ್ತಿದ್ದರು. ಒಂದೊಂದು ತುಪ್ಪದ ಕುಡಿಕೆ ಖಾಲಿಯಾದಾಗಲೂ ಅಗ್ನಿ ತನ್ನ ನಾಲಿಗೆಯನ್ನು ಮೇಲಕ್ಕೆ ಚಾಚುತ್ತಾ ಬೃಹದಾಕಾರವಾಗಿ ಬೆಳೆಯುತ್ತಿತ್ತು. ಅದರ ಜ್ವಾಲೆಯ ಪ್ರಭೆಯ ಜೊತೆಗೆ ಸಿಡಿದೇಳುವ ಶಬ್ದದೊಡನೆ ಹೋಮಕುಂಡ ಘರ್ಜಿಸುತ್ತಿತ್ತು.

ಶಂಭು ತನ್ನೆದುರಿಗಿದ್ದ ಅಗ್ನಿಯನ್ನು ನೋಡುತ್ತಾ ನಿಂತ. ಅವನಿಗರಿವಾಗದಂತೆ ಅವನ ಕೈ ಭುಜವನ್ನ ಸವರಿತು. ನೋಂಪಿಯ ತುಪ್ಪದ ಕುಡಿಕೆ ಅಲ್ಲಿರಲಿಲ್ಲ. ರಾತ್ರಿಯ ಅವಘಡದಲ್ಲಿ ಅದು ಎಲ್ಲೋ ಬಿದ್ದು ಚೂರಾಗಿತ್ತು.

ತನ್ನ ಭುಜವನ್ನು ಸವರಿಕೊಂಡ ಶಂಭು ಮತ್ತೆ ಹೋಮಕುಂಡದ ಕಡೆ ನೋಡಿದ. ಅವನ ಮನಸ್ಸಿನಲ್ಲಿ ಗತಕಾಲದ ಚಿತ್ರವೆಲ್ಲಾ ಕ್ಷಣಮಾತ್ರ ಹಾದು ಹೋಯಿತು.

ಎಲ್ಲರೂ ಹೋಮಕುಂಡಕ್ಕೆ ತುಪ್ಪದ ಕುಡಿಕೆಗಳನ್ನು ಎಸೆಯುತ್ತಿದ್ದರು. ಹೋಮಾಗ್ನಿ ತನ್ನ ಕೆನ್ನಾಲಿಗೆಗಳನ್ನು ಮೇಲಕ್ಕೆ ಮೇಲಕ್ಕೆ ಚಾಚುತ್ತಿತ್ತು.

ಜನ ನೋಡುತ್ತಲೇ ಇದ್ದರು.

ಇದ್ದಕ್ಕಿದ್ದ ಹಾಗೆ ಶಂಭು ಮುನ್ನುಗ್ಗಿದ. ಏನಾಯಿತು ಎಂದು ನೋಡುವುದರೊಳಗೆ, ಶಂಭು ಜೋರಾಗಿ ಕಿರುಚುತ್ತಾ ಹೋಮಕುಂಡಕ್ಕೆ ನೆಗೆದಿದ್ದ. ಗರಬಡಿದವರಂತೆ ನಿಂತ ಜನರ ಎದುರಿಗೆ ಶಂಭು ಕುಣಿದು ಕುಪ್ಪಳಿಸುತ್ತಾ ಹೋಮ ಕುಂಡದೊಳಗೆ ದೈತ್ಯ ನೃತ್ಯವಾಡತೊಡಗಿದ.

ಕೆಲವರು ಕೂಗುವ ಪ್ರಯತ್ನ ಮಾಡಿದರು. ಆದರೆ ಬಹಳ ಜನರು ಭಯಭ್ರಾಂತರಾಗಿ ಬಾಯಿ ತೆರೆದು ನಿಂತಿದ್ದರು.

ಆಜ್ಯದಿಂದ ಬೃಹದಾಕಾರವಾಗಿ ನಾಲಿಗೆಯನ್ನು ಚಾಚಿ ಮೇಲೇಳುತ್ತಿದ್ದ ಅಗ್ನಿಯ ಮಧ್ಯೆ ಕುಣಿಯುತ್ತಾ ಕುಣಿಯುತ್ತಾ ಶಂಭುವಿನ ದೇಹ ಕುಸಿಯಿತು.

★★★

ಹೇ ಪ್ರಾಣವೇ, ನೀನು ಕಣ್ಣು, ನಾಲಿಗೆ, ಕಿವಿ ಇತ್ಯಾದಿ ಇಂದ್ರಿಯಗಳಲ್ಲಿ, ಮನಸ್ಸೇ ಆದಿಯಾದ ಅಂತಃಕರಣಗಳಲ್ಲಿ ವ್ಯಾಪಿಸಿದ್ದೀಯ, ಅವನ್ನು ಕಲ್ಯಾಣಮಯವನ್ನಾಗಿಸು.

ಹೇ ಪ್ರಾಣವೇ, ನೀನು ಶರೀರವನ್ನು ಬಿಟ್ಟು ಹೋಗಬೇಡ. ಇದು ನಮ್ಮ ಪ್ರಾರ್ಥನೆ.

⌘